**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 264(126)
ಸದಸ್ಯರ ಹೆಸರು : ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 13/09/2022
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು (ಗ್ರಾಮಾಂತರ) ಮತ್ತು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಪುರಸಭೆ/ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹಲವಾರು ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆಗಳು ಇಲ್ಲದೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಬೆಂಗಳೂರು (ಗ್ರಾಮಾಂತರ) ಹಾಗೂ ರಾಮನಗರ ಜಿಲ್ಲೆಯ ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ವಿವರಗಳು ಈ ಕೆಳಕಂಡಂತಿವೆ:<br><br>**ಬೆಂಗಳೂರು (ಗ್ರಾಮಾಂತರ)**<br>**ದೇವನಹಳ್ಳಿ ಪುರಸಭೆ** ವ್ಯಾಪ್ತಿಯ ಬಡಾವಣೆಗಳಲ್ಲಿ ಯಾವುದೇ ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆಗಳು ಹದಗೆಟ್ಟಿರುವುದಿಲ್ಲ. 2021-22ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ ಸದರಿ ಪುರಸಭೆಗೆ ರೂ.10.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ.<br><br>**ವಿಜಯಪುರ ಪುರಸಭೆ**ಯ ಅಶೋಕ ನಗರ ಹಾಗೂ ಇತರೆ ಬಡಾವಣೆಗಳಲ್ಲಿ ಸಮಸ್ಯೆಗಳು ಕಂಡುಬಂದಿದ್ದು, ವಿವಿಧ ಯೋಜನೆಗಳಡಿಯಲ್ಲಿ ಕೈಗೊಂಡು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತಿದೆ. 2021-22ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ ಸದರಿ ಪುರಸಭೆಗೆ ರೂ.10.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ.<br><br>**ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ**ಯು 2021-22ನೇ ಸಾಲಿನಲ್ಲಿ ಹೊಸದಾಗಿ ಮೇಲ್ದರ್ಜೆಗೇರಿರುವುದರಿಂದ ಕಳೆದ 3 ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ ಹಾಗೂ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ ರೂ.5.00 ಕೋಟಿಗಳ ಹಂಚಿಕೆ ಮಾಡಲಾಗಿದ್ದು, ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ.<br><br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಹಾಲಿಯಿರುವ ಒಳಚರಂಡಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ಹಾಗೂ ಮಲಿನ ಶುದ್ದೀಕರಣ ಘಟಕವನ್ನು ನಿರ್ಮಿಸುವ ಬಗ್ಗೆ ಸರ್ವೆ ಕಾರ್ಯ ಕೈಗೊಳ್ಳಲು ಅಂದಾಜು ಪಟ್ಟಿಯನ್ನು |
| ಆ) | ಬಂದಿದ್ದಲ್ಲಿ, ಯಾವ ಯಾವ ಬಡಾವಣೆಗಳಲ್ಲಿ ಈ ಸಮಸ್ಯೆಗಳು ಕಂಡು ಬಂದಿವೆ ಮತ್ತು ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಾರ್ಡ್‌ವಾರು ವಿವರ ನೀಡುವುದು) | |

| | | |
|---|---|---|
| | | ರೂ. 4.08 ಲಕ್ಷಗಳಿಗೆ ತಯಾರಿಸಿ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯಿತಿ ಬಾಶೆಟ್ಟಿಹಳ್ಳಿ ರವರಿಗೆ ದಿನಾಂಕ: 04/06/2022ರಲ್ಲಿ ಮೇಲು ರುಜು ಮಾಡಿ ಅಂದಾಜು ಮೊತ್ತವನ್ನು ಮಂಡಳಿಗೆ ಭರಿಸುವಂತೆ ಕೋರಿ ಪತ್ರ ಬರೆಯಲಾಗಿದೆ.<br><br>**ರಾಮನಗರ ಜಿಲ್ಲೆ:**<br>**ಪುರಸಭೆ ಮಾಗಡಿ:** ಮಾಗಡಿ ಪುರಸಭೆಯ ನಟರಾಜ ಬಡಾವಣೆ, ಟಿ.ಎ.ಆರ್ ಬಡಾವಣೆ, ಶನಿಮಹಾತ್ಮ ಟೆಂಪಲ್ ದೇವಸ್ಥಾನದ ಬಡಾವಣೆ, ಸೋಮೇಶ್ವರ ಬಡಾವಣೆ, ಐ.ಡಿ.ಎಸ್.ಎಂ.ಟಿ ಬಡಾವಣೆ, ಹರಿಜನ ಕಾಲೋನಿ, 3ನೇ ವಾರ್ಡಿನ ವನರಂಗಯ್ಯನ ಮನೆಯ ರಸ್ತೆಯಲ್ಲಿ ಮತ್ತು ಕಪ್ಪಚಾರನ ಬೀದಿ, 4ನೇ ವಾರ್ಡಿನ ಟಿ.ಡಿ ಸುಶೀಲ ರವರ ಮನೆಯಿಂದ ಶ್ರೀನಿವಾಸ ರವರ ಮನೆ ಮುಖಾಂತರ ಬೆಂಗಳೂರು ರಸ್ತೆ ಆರ್ಚ್‌ವರೆಗೆ, 5ನೇ ವಾರ್ಡಿನ ಅಶ್ವಿನಿ ಚಂದ್ರಣ್ಣ ಮನೆ ಹತ್ತಿರ, 7ನೇ ವಾರ್ಡಿನ ಗುಂಡಪ್ಪ ರವರ ಮನೆ ಹತ್ತಿರ, ಅರೇಕಲ್ಲು ಹಟ್ಟಿ ಮತ್ತು ನರಸಿಂಹಯ್ಯ ಕಾಲೋನಿಯಲ್ಲಿ, 8ನೇ ವಾರ್ಡಿನ ಗಣೇಶಯ್ಯನ ಮನೆಯಿಂದ ಜವರಪ್ಪ ರವರ ಮನೆವರೆಗೆ, 12ನೇ ವಾರ್ಡಿನ ಹೊಂಬಾಳಮ್ಮನ ಪೇಟೆ ಶನಿಮಹಾತ್ಮ ದೇವಸ್ಥಾನದ ಹತ್ತಿರದಿಂದ ಯಜಮಾನರವರ ಮನೆವರೆಗೆ, ಕುಂಬಯ್ಯ ಮನೆ ಬೀದಿ, ಸತ್ಯಪ್ಪ ರವರ ಮನೆ ಬೀದಿ, ಶಾಂತಮ್ಮ ರವರ ಮನೆ ಬೀದಿ, ರಮೇಶ ರವರ ಮನೆ ಬೀದಿ, ಯಜಮಾನ್ ರಂಗಯ್ಯ ರವರ ಮನೆ ಬೀದಿ, ಟ್ಯಾಂಕ್ ರಸ್ತೆ ಬೀದಿಗಳಲ್ಲಿ, 19ನೇ ವಾರ್ಡಿನ ದಸ್ತಗೀರ್ ಮನೆಯಿಂದ ಮದೀನ ಮಸೀದಿವರೆಗೆ, 20ನೇ ವಾರ್ಡಿನ ಗೌರಮ್ಮನ ಕೆರೆ ಹತ್ತಿರದಿಂದ ಕೆರೆ ಕೋಡಿವರೆಗೆ, 6ನೇ ವಾರ್ಡಿನ ಕೆ.ಇ.ಬಿ ರವರ ಮನೆ ಹತ್ತಿರದಿಂದ ಬಿ.ಜಿ.ಎಸ್ ಕಾಲೇಜು ರಸ್ತೆಯಲ್ಲಿ, 10ನೇ ವಾರ್ಡಿನ ಗಿರಿಯಪ್ಪ ಮನೆಯಿಂದ ಬಿ.ಕೆ ರಸ್ತೆವರೆಗೆ, 23ನೇ ವಾರ್ಡಿನ ಖಲೀಂ ರವರ ಮನೆಯಿಂದ ರಿಯಾಜ್ ರವರ ಮನೆವರೆಗೆ, 15ನೇ ವಾರ್ಡಿನ ಗೋಪಾಲಣ್ಣ ರವರ ತೋಟದಿಂದ ಚಿಕ್ಕಣ್ಣಪ್ಪನವರ ಪ್ರಶಾಂತ ಮನೆವರೆಗೆ. 10ನೇ ವಾರ್ಡಿನ ಗೋಪಾಲ್ ಮನೆಯಿಂದ ಹಳೇ ಯು.ಜಿ.ಡಿ ಲೈನ್‌ವರೆಗೆ, ವಾರ್ಡ್ ನಂ.11 ವಿನಾಯಕ ಸಮುದಾಯಭವನದಿಂದ ಗಂಗರಾಜು ಮನೆವರೆಗೆ ಹಾಗೂ ಶಿವರಾಜ್ ರವರ ಮನೆಯಿಂದ ರೇಣುಕ ರವರ ಮನೆವರೆಗೆ, ಕೆ.ಇ.ಬಿ ಶಿವರಾಜ್ ಮನೆಯಿಂದ ಹೊಂಬಾಳಮ್ಮನ ಪೇಟೆ ಹಳ್ಳದವರೆಗೆ, 9ನೇ ವಾರ್ಡಿನ ಐ.ಡಿ.ಎಸ್.ಎಂ.ಟಿ ಬಡಾವಣೆಯಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿ 6ನೇ ವಾರ್ಡಿನ ಕೆ.ಇ.ಬಿ ಮುಂಭಾಗ ಮತ್ತು ಹಿಂಭಾಗ ಹಾಗೂ 1ನೇ ವಾರ್ಡಿನ ರೇಷ್ಮೆ ಇಲಾಖೆ ಹಿಂಭಾಗ ನಟರಾಜ ಬಡಾವಣೆ, 10ನೇ ವಾರ್ಡಿನ ಶಾದಿ ಮಹಲ್‌ನಿಂದ ಪರಂಗಿಚಿಕ್ಕನ ಪಾಳ್ಯವರೆಗೆ ಇಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆಗಳು ಇಲ್ಲದೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಡಿ ಹಂತ-ಹಂತವಾಗಿ ಒಳಚರಂಡಿ ವ್ಯವಸ್ಥೆ ಕಾಮಗಾರಿ ಮತ್ತು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಮುಂದುವರೆದು, 2021-22ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ ಸದರಿ ಪುರಸಭೆಗೆ ರೂ.10.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, |

| | | |
|---|---|---|
| | | ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ.<br><br>**ಬಿಡದಿ ಪುರಸಭೆ:** ಬಿಡದಿ ಪುರಸಭೆ ವ್ಯಾಪ್ತಿಯ 23 ವಾರ್ಡ್‌ಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆಗಳ ಸಮಸ್ಯೆಗಳು ಕಂಡುಬಂದಿದ್ದು, ನಗರೋತ್ಥಾನ-3ರ ಅನುದಾನದಲ್ಲಿ KUWS&DB ವತಿಯಿಂದ ಒಳಚರಂಡಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮತ್ತು ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ ಒಳಚರಂಡಿ ಮತ್ತು ರಸ್ತೆ ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. 2021-22ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ ಸದರಿ ಪುರಸಭೆಗೆ ರೂ.10.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ.<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬಿಡದಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆಯನ್ನು ಕೈಗೊಳ್ಳಲು ರೂ. 98.20 ಕೋಟಿಗಳಿಗೆ ಸರ್ಕಾರದಿಂದ ಅನುಮೋದನೆ ನೀಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>**ಹಾರೋಹಳ್ಳಿ ಪಟ್ಟಣ ಪಂಚಾಯಿತಿ:** ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಒಳಚರಂಡಿ ವ್ಯವಸ್ಥೆ ಸಮಸ್ಯೆಗೆ ಸಂಬಂಧಿಸಿದಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಹಾರೋಹಳ್ಳಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ. 50.28 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಏಕರೂಪ ದರಪಟ್ಟಿಗೆ ಮಾರ್ಪಡಿಸಿ ಪ್ರಸ್ತಾವನೆಯನ್ನು ಮರುಸಲ್ಲಿಸುವಂತೆ ಸರ್ಕಾರದ ದಿನಾಂಕ: 15/06/2022ರ ಪತ್ರದಲ್ಲಿ ನಿರ್ದೇಶನ ನೀಡಲಾಗಿದೆ.<br><br>2021-22ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ ಸದರಿ ಪುರಸಭೆಗೆ ರೂ.5.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ.<br><br>ಹಾರೋಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ರ‍್ಸತೆಗಳ ಸಮಸ್ಯೆಗಳು ಬಹಳ ಇದ್ದು, ಈಗಾಗಲೇ ರೂ 2.83 ಕೋಟಿ ಪಟ್ಟಣ ಪಂಚಾಯಿತಿ ಸ್ವಂತನಿಧಿ ಅನುದಾನದಡಿ ರಸ್ತೆ ಅಭಿವೃದ್ಧಿ ಕಾಮಗಾರಿ ಟೆಂಡರ್ ಕರೆದು ಕೆಲಸ ನಡೆಯುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಹಂತ-4 ಅನುದಾನದಡಿ ರೂ 3.38 ಲಕ್ಷಗಳಿಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಮಾಡಲು ಈಗಾಗಲೇ 2 ನೇ ಬಾರಿ ಟೆಂಡರ್ ಕರೆಯಲಾಗಿದೆ, ಹಾಗೂ ಪಟ್ಟಣ ಪಂಚಾಯಿತಿಯ ಸ್ವಂತ ಅನುದಾನದಡಿ ರೂ 5.48 ಕೋಟಿಗಳ ಮೊತ್ತಕ್ಕೆ ಈಗಾಗಲೇ ಮಾನ್ಯ ಜಿಲ್ಲಾಧಿಕಾರಿಗಳಿಂದ ರ‍್ಸತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಆಡಾಳಿತಾತ್ಮಕ ಅನುಮೋದನೆ ಪಡೆಯಲಾಗಿದ್ದು, ಶೀಘ್ರದಲ್ಲೆ ಟೆಂಡರ್ ಪ್ರಕಟಣೆ ಕರೆಯಲಾಗುವುದು. |

ಇ) ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಪುರಸಭೆ/ಪಟ್ಟಣ ಪಂಚಾಯಿತಿ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ಈ ಅನುದಾನವನ್ನು ಯಾವ ಯಾವ ಉದ್ದೇಶಗಳಿಗೆ ಬಳಸಲಾಗಿದೆ; (ವಿವರ ನೀಡುವುದು)

ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಪುರಸಭೆ/ಪಟ್ಟಣ ಪಂಚಾಯಿತಿ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ | ಜಿಲ್ಲೆಯ ಹೆಸರು | ಯೋಜನೆ | 2019-20 | 2020-21 | 2021-22 |
|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ನಗರೋತ್ಥಾನ (ಮುನಿಸಿಪಾಲಿಟಿ) –3ನೇ ಹಂತ | 523.8 | 89.18 | 0.00 |
| | | 14ನೇ ಹಣಕಾಸು | 489.28 | 0.00 | 0.00 |
| | | 15ನೇ ಹಣಕಾಸು | 0.00 | 474 | 353 |
| | | ಎಸ್.ಡಬ್ಲ್ಯೂ.ಎಂ ಹಾಗೂ ಐ.ಇ.ಸಿ. | 344.51 | 10 | 116.76 |
| | | ಎಸ್.ಎಫ್.ಸಿ. ಮುಕ್ತ ನಿಧಿ | 261.00 | 102.05 | 136.00 |
| | | ಎಸ್.ಎಫ್.ಸಿ. ಕುಡಿಯುವ ನೀರು | 57.00 | 20.00 | 10.00 |
| 2 | ರಾಮನಗರ | ನಗರೋತ್ಥಾನ (ಮುನಿಸಿಪಾಲಿಟಿ) –3ನೇ ಹಂತ | 803.71 | 206.53 | 95.22 |
| | | 14ನೇ ಹಣಕಾಸು | 380.22 | 0.00 | 0.00 |
| | | 15ನೇ ಹಣಕಾಸು | 0.00 | 372.00 | 276.00 |
| | | ಎಸ್.ಡಬ್ಲ್ಯೂ.ಎಂ ಹಾಗೂ ಐ.ಇ.ಸಿ. | 149.92 | 10.00 | 86.91 |
| | | ಎಸ್.ಎಫ್.ಸಿ. ಮುಕ್ತ ನಿಧಿ | 220 | 81.02 | 106.00 |
| | | ಎಸ್.ಎಫ್.ಸಿ. ಕುಡಿಯುವ ನೀರು | 47.00 | 7.50 | 13.50 |

ಮೇಲ್ಕಂಡ ಯೋಜನೆಗಳಡಿ ಅನುದಾನವನ್ನು ನೀರು ಸರಬರಾಜು, ರಸ್ತೆ, ಚರಂಡಿ, ಕಟ್ಟಡ, ಕುಡಿಯುವ ನೀರು, ವಿದ್ಯುತ್, ಘನತ್ಯಾಜ್ಯ ವಸ್ತು ನಿರ್ವಹಣೆ, ಸಾಮೂಹಿಕ ಮತ್ತು ಸಾರ್ವಜನಿಕ ಶೌಚಾಲಯ ಮತ್ತು ನೈರ್ಮಲ್ಯ, ಒಳಚರಂಡಿ ಕಾಮಗಾರಿಗಳು, ಮಳೆನೀರು ಚರಂಡಿ, ರಸ್ತೆ ಮತ್ತು ಪಾದಚಾರಿಗಳ ಮಾರ್ಗ, ಸಾಮೂಹಿಕ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ), ಸ್ಮಶಾನ ಅಭಿವೃದ್ಧಿ, ಬೀದಿ ದೀಪ ಮತ್ತು ಇಂಧನ ಉಳಿತಾಯ ಹಾಗೂ ಇತರೆ ಕಾಮಗಾರಿಗಳಿಗೆ ಬಳಸಲಾಗುತ್ತದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬಿಡದಿ ಪಟ್ಟಣ ಮತ್ತು ಮಾರ್ಗ ಮಧ್ಯದ 9 ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಕಲ್ಪಿಸುವ ಯೋಜನೆಗೆ

| | | |
|---|---|---|
| | | ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ರೂ. 1532.22 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾವನ್ನು ಯೋಜನೆಯ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ.<br>ಬಿಡದಿ ಪಟ್ಟಣಕ್ಕೆ ಒಳಚರಂಸಿ ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆಗೆ ಕಳೆದ 3 ವರ್ಷಗಳಲ್ಲಿ ರೂ. 364.38 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನವನ್ನು ಯೋಜನೆಯ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ.<br>ಬಿಡದಿ ಪಟ್ಟಣಕ್ಕೆ ನಗರೋತ್ಥಾನ ಮುನಿಸಿಪಾಲಿಟಿ-3ರ ಯೋಜನೆಗೆ ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ರೂ. 383.10 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಸದರಿ ಅನುದಾನವನ್ನು ಯೋಜನೆಯ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ. |
| ಈ) | ಈ ಜಿಲ್ಲೆಗಳ ಪುರಸಭೆ/ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿಗೆ ಮತ್ತು ಸ್ವಚ್ಛತೆಗಾಗಿ ಕೈಗೊಂಡಿರುವ ಯೋಜನೆಗಳಾವುವು? (ಸಂಪೂರ್ಣ ವಿವರ ನೀಡುವುದು) | ಸ್ವಚ್ಛ ಬಾರತ ಮಿಷನ್ ಯೋಜನೆಯಡಿ ನಗರ/ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಮೂಲದಲ್ಲಿ ಬೇರ್ಪಡಿಸಿ, ಹಸಿ, ಒಣ ಹಾಗೂ ಅಪಾಯಕಾರಿ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ಸಂಸ್ಕರಣೆ ಪ್ರದೇಶಕ್ಕೆ ಸಾಗಣೆ ಮಾಡಿ ಹಸಿ ತ್ಯಾಜ್ಯವನ್ನು ಗೊಬ್ಬರವಾಗಿ ಪರಿವರ್ತಿಸುವುದು ಹಾಗೂ ಒಣ ತ್ಯಾಜ್ಯವನ್ನು RDF ಆಗಿ ಹತ್ತಿರದ ಸಿಮೆಂಟ್ ಕಾರ್ಖಾನೆಗಳಿಗೆ ವಿಲೇಮಾಡಬೇಕಿರುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಯೋಜನಾವರದಿಯನ್ನು ಸಿದ್ಧಪಡಿಸಲು ತಿಳಿಸಲಾಗಿರುತ್ತದೆ. ಈ ಮಧ್ಯೆ ಯೋಜನಾ ವರದಿ ಅನುಮೋದನೆ ಪಡೆಯುವವರೆಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ತ್ಯಾಜ್ಯ ಸಂಗ್ರಹಣೆ ಅನುವಾಗುವಂತೆ ವಾಹನಗಳನ್ನು ಖರೀದಿಸಲು ಪ.ಪಂ ಗಳಿಗೆ ತಲಾ ರೂ.20.00 ಲಕ್ಷಗಳು ಹಾಗೂ ಪುರಸಭೆಗಳಿಗೆ ರೂ.30.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. |

ಸಂಖ್ಯೆ: ನಅಇ 208 ಜಿಇಎಲ್ 2022(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು